**ದಿನಾಂಕಃ 09-03-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿಗಳ ಪರ ಶ್ರೀ ಕೆ.ಎ.ಎಸ್. ವಕೀಲರಿಂದಃ**

ನಮ್ಮ ತಾಯಿ ಇರುವ ಕಾಲಕ್ಕೆ ದಿನಾಂಕ 18-12-1986 ರಂದು ನನ್ನ ಅಣ್ಣ ತಮ್ಮಂದಿರು ಅಕ್ಕ ತಂಗಿಯರ ಮದ್ಯೆ ಕುಟುಂಬದ ಎಲ್ಲಾ ಆಸ್ತಿಗಳನ್ನು ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ಲಾಟ್ ನಂ. 10 ರಲ್ಲಿ ನನಗೆ, ಶಹಜಾದ್ ಬಿ, ಜಮೀಲಾ ಬೀ, ಶಕೀಲಾ ಬಾನು ಹಾಗೂ ನಮ್ಮ ತಾಯಿ ಜೈತುನ್ ಬಿ ಇವರಿಗೆ ತಲಾ 35 X 12.5 ಅಡಿ ಖಾಲಿ ಜಾಗ ಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ರೀತಿ ಆಸ್ತಿ ಕೊಟ್ಟಿದ್ದರೂ ಸಹ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಚೆಕ್ಕು ಬಂದಿ ಹೇಳಲು ಬರುವುದಿಲ್ಲ. ದಾವೆ ಹಾಕಲು ನಾನೇ ಮಾಹಿತಿ ಕೊಟ್ಟಿದ್ದೇನೆ. ದಾವಾ ಶೆಡ್ಯೂಲ್ ನಲ್ಲಿರುವ ಸರ್ವೆ ನಂಬರುಗಳು, ಜಮೀನುಗಳು ಸೈಟುಗಳಾಗಿ ಮಾರಾಟವಾಗಿವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಶೆಡ್ಯೂಲ್ ಬ ದಲ್ಲಿರುವ ಜಮೀನಿನ ಪಹಣಿಗಳಲ್ಲಿ ಬೆಳೆಗಳ ವಿವರಗಳನ್ನು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ.

2. ಪ್ಲಾಟ್ ನಂ. 10, 702/10 ಇ ಇದನ್ನು ನನ್ನ ಸಹೋದರ ಸಹೋದರಿಯರು ನನಗೆ ಕೊಡುವ ಬದಲಾಗಿ ನನ್ನ ಗಂಡ ಹೆಸರಿನಲ್ಲಿ ಖರೀದಿ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಶಕೀಲ ಇವರ ಮದುವೆ ಸಂದರ್ಭದಲ್ಲಿ ನನ್ನ ಅಣ್ಣ ಜಬೀವುಲ್ಲಾ ಹಾಗೂ ತಮ್ಮಂದಿರು ಸೇರಿ ಆ ಪ್ಲಾಟನ್ನು ಮಾರಾಟ ಮಾಡುವ ವಿಚಾರದಲ್ಲಿದ್ದರು. ನನ್ನ ಗಂಡ ಹಣ ಕೊಟ್ಟು ಖರೀದಿ ಮಾಡಿದ್ದಾರೆ. ಈ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಆ ಆಸ್ತಿಯನ್ನು ನನ್ನ ಪಾಲಿನ ಬದಲಾಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಈಗಾಗಲೇ ಒಟ್ಟು ಕುಟಂಬದಲ್ಲಿ ನನಗೆ ಬರಬೇಕಾದ ಆಸ್ತಿಯನ್ನು ನಾನು ತೆಗದುಕೊಂಡಿದ್ದು ಈಗ ನಾನು ಒಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಿಪಿಸಿ ನಂ.702/10 ಎ ಇದು ನನ್ನ ಹೆಸರಿಗೆ ಇದೆ ಎಂದರೆ ಸರಿ. ಇದಲ್ಲದೇ ಇನ್ನು ಒಂದು ಆಸ್ತಿ ನನ್ನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ನಾನು ಒಂದು ಸುಳ್ಳು ದಾನ ಪತ್ರವನ್ನು ಸೃಷ್ಟಿಸಿ ಆ ಮೂಲಕ ಖಾತೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರಧಾನ ಸಿವಿಲ್ ನ್ಯಾಯಾಲಯ ರಾಣೇಬೆನ್ನೂರಿನಲ್ಲಿ ಓ ಎಸ್ ನಂ.79/2012 ಎನ್ನುವ ದಾವೆ ನಡೆದಿತ್ತು ಎಂದರೆ ಸರಿಯಲ್ಲ. ದಾವಾ ಶೆಡೂಲ್ ಕ -1 ರಲ್ಲಿರುವ ಆಸ್ತಿಗಳು ನನ್ನ ಪ್ರತಿವಾದಿ 5 ರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ.

4. ವಿಪಿಸಿ ನಂ.702/12 ಎ ಇದು ಖಲೀಲನ ಹೆಸರಿನಲ್ಲಿತ್ತು ಎಂದರೆ ಸರಿ. ವಾಟ್ನಿಯಾಗಿಲ್ಲ. 5 ನೇ ಪ್ರತಿವಾದಿಯು ತನ್ನ ಭಾಗಕ್ಕೆ ಬಂದ ಆಸ್ತಿಯನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ನಾನು ಈ ಹಿಂದೆಯೂ ಸುಳ್ಳು ದಾಖಲೆಯನ್ನು ಸೃಷ್ಟಿಸಿದಂತೆ ಈಗಲೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಜೆ.ವಿ.ಕುಲಕರ್ಣಿ)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.